**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ.**

ಸಿಸಿ ನಂ. 314/19

| | | |
|---|---|---|
| ಸಾಕ್ಷಿಯ ಹೆಸರು | ರಾಕೇಶ್ | ಪಿ.ಡಬ್ಲ್ಯು-1 |
| ತಂದೆಯ ಹೆಸರು | ಚಂದ್ರೇಗೌಡ | ಸಿ.ಡಬ್ಲ್ಯು-3 |
| ವಯಸ್ಸು | 18 **ವರ್ಷ** | |
| ಉದ್ಯೋಗ | ವಿದ್ಯಾರ್ಥಿ | ದಿನಾಂಕಃ 28-10-2022. |
| ವಾಸ | ಸಿಂಗಾಪುರ ಗ್ರಾಮ . | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಎಪಿಪಿ ರವರಿಂದ

ಚಾಸಾ-1 ನನ್ನ ತಾಯಿ. ಚಾಸಾ-2 ರವರು ನನ್ನ ಅಕ್ಕ. ಚಾಸಾ-4 ರಿಂದ 9 ರವರು ಪರಿಚಿತರು. ಆರೋಪಿ ನನ್ನ ತಂದೆ. ಚಾಸಾ-2 ರವರು ಪ್ರೀತಿಸಿ ಮದುವೆಯಾದ ವಿಚಾರವಾಗಿ ಚಾಸಾ-1 ರವರು ವಿಷ ಸೇವಿಸಿದ್ದು , ಮರಣ ಹೊಂದಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ಮತ್ತು ಆರೋಪಿಯೊಂದಿಗೆ ಯಾವುದೇ ಗಲಾಟೆಯಾಗಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಇರುವುದಿಲ್ಲ, ಪೋಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಸರ್ಕಾರಿ ವಕೀಲರು ಕೇಳಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅವಶ್ಯಕವೆಂದು ಮನಗಂಡು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಎಪಿಪಿ ರವರಿಂದ

ಆರೋಪಿಯು ಮದ್ಯಪಾನ ಮಾಡಿಕೊಂಡು ಬಂದು ನಮ್ಮ ತಾಯಿಯನ್ನು ಉದ್ದೇಶಿಸಿ , ತಂದೆ ತಾಯಿ ಇಲ್ಲದ ಅನಾಥಳನ್ನು ನಾನು ಮದುವೆಯಾಗಿದ್ದೇನೆ , ಎಂದು ನನ್ನ ನನಗೆ , ನನ್ನ ತಾಯಿಗೆ ಮತ್ತು ಚಾಸಾ-2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು , ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರೆಂದರೆ ಸರಿಯಲ್ಲ. ಸದರಿ ಗಲಾಟೆಯ ವಿಚಾರವಾಗಿ ಚಾಸಾ-4 ಮತ್ತು 6 ರವರು ಜಗಳವನ್ನು ತೀರ್ಮಾನ ಮಾಡಿ

ಸಮಾಧಾನಪಡಿಸಿದರು ಎಂದರೆ ಸರಿಯಲ್ಲ. ದಿಃ03-03-2019 ರಂದು ಆರೋಪಿಯು ರಾತ್ರಿ 10-30 ರ ಸಮಯದಲ್ಲಿ ನನಗೆ ಮತ್ತು ಚಾಸಾ-1 ಮತ್ತು 2 ರವರಿಗೆ ಕುಡಿಯಲು ಹಣ ಕೊಡಿ ಎಂದು ಕೇಳಿದ್ದು , ನಾವು ಇಲ್ಲ ಎಂದು ಹೇಳಿದ ಕಾರಣ ನಮ್ಮನ್ನು ಮನೆ ಬಿಟ್ಟು ಹೋಗಿ , ಎಲ್ಲಾದರೂ ಸಾಯಿರಿ ಎಂದು ಬೈದು ಚಾಸಾ-1 ರವರಿಗೆ ಕೈಯಿಂದ ಮೈಕೈಗೆ ಹೊಡೆದು , ಕಾಲಿನಿಂದ ಒದ್ದು , ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡಿದರು ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ್ದು , ಹೇಳಿಕೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ನಮ್ಮ ತಾಯಿ ಆರೋಪಿಯು ನೀಡಿದ ಹಿಂಸೆಯನ್ನು ತಾಳಲಾರದೆ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ನಿಪಿ-1 ರ ರೀತ್ಯಾ ಹೇಳಿಕೆ ನೀಡಿದ್ದರೂ , ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.,
ಆಲೂರು.